ಆರನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2022

ನಿರಂತರ

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಪ್ರಶಸ್ತಿ-2022

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಉಪಕ್ರಮಗಳ ಮೂಲಕ ಹಲವಾರು ಕಾರ್ಖಾನೆಗಳು ಹಾಗೂ ಸಂಸ್ಥೆಗಳು, ಕರ್ನಾಟಕದ ಅಭಿವೃದ್ಧಿಗೆ ಪೂರಕವಾಗಿರುವುದು ಹೆಮ್ಮೆಯ ವಿಚಾರ. ಸರ್ಕಾರದ ಸದುದ್ದೇಶವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡು, ಸಿ.ಎಸ್.ಆರ್.ನ್ನು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾರ್ಖಾನೆಗಳು ಮತ್ತು ಸಂಸ್ಥೆಗಳನ್ನು ಮೆಚ್ಚಲೇಬೇಕು ಮತ್ತು ಅಭಿನಂದಿಸಲೇಬೇಕು. ಈ ನಿಟ್ಟಿನಲ್ಲಿ **"ಅತ್ಯುತ್ತಮ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಪ್ರಶಸ್ತಿ-2022"**ರನ್ನು ನೀಡಲು ತೀರ್ಮಾನಿಸಿ, ಆಸಕ್ತಿವುಳ್ಳ ಕಾರ್ಖಾನೆಗಳು ಮತ್ತು ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.



ಪ್ರಶಸ್ತಿಗಳ ವಿಭಾಗಗಳು

ಬೃಹತ್ ಗಾತ್ರದ ಸಂಸ್ಥೆಗಳು	1000 ಉದ್ಯೋಗಿಗಳು	02 ಪ್ರಶಸ್ತಿ
ಮಧ್ಯಮ ಗಾತ್ರದ ಸಂಸ್ಥೆಗಳು	501 – 1000	02 ಪ್ರಶಸ್ತಿ
ಅರೆ-ಮಧ್ಯಮ ಗಾತ್ರದ ಸಂಸ್ಥೆಗಳು	251 – 500	02 ಪ್ರಶಸ್ತಿ
ಸಣ್ಣ ಗಾತ್ರದ ಸಂಸ್ಥೆಗಳು	20 – 250	02 ಪ್ರಶಸ್ತಿ

ನಿಯಮಗಳು

1. ಸಿ.ಎಸ್.ಆರ್. ಉಪಕ್ರಮಗಳು (CSR initiatives) 2021 ಮತ್ತು 2022 ವರ್ಷಗಳಿಗೆ ಸಂಬಂಧಪಟ್ಟಿರಬೇಕು.
2. ಎಲ್ಲಾ ಉಪಕ್ರಮಗಳು ಕಾರ್ಯಾಚರಣೆಯಲ್ಲಿರಬೇಕು.
3. ಎಲ್ಲಾ ಉಪಕ್ರಮಗಳಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳನ್ನು ಫೋಟೋ ಮತ್ತು ವಿಡಿಯೋಗಳ ಮೂಲಕ ಅರ್ಜಿಯೊಂದಿಗೆ ಸಲ್ಲಿಸಬೇಕು.
4. ಪ್ರಶಸ್ತಿಗೆ ಸೂಕ್ತ ಕಾರ್ಖಾನೆ ಮತ್ತು ಸಂಸ್ಥೆಗಳನ್ನು ಆಯ್ಕೆ ಮಾಡಲು, ಪ್ರತ್ಯೇಕ ತೀರ್ಪುಗಾರರ ಸಮಿತಿಯು ರೂಪಗೊಂಡಿದ್ದು, ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
5. ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 30-10-2022.**
6. ಅರ್ಜಿ ಶುಲ್ಕ **ರೂ: 10,000/-** ಮಾತ್ರ. ಈ ಶುಲ್ಕವನ್ನು ಸಮ್ಮೇಳನದ ವೆಚ್ಚಗಳಿಗೆ ಮಾತ್ರ ಬಳಸಲಾಗುತ್ತದೆ.